ಶ್ರೀ ಎರಭದ್ರಪ್ಪ ಈರಪ್ಪ.—ಆ ಗ್ರಾಮಗಳವರಿಗೆ ಎಂದು ಕೇಳಲಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಅವರನ್ನು ಕೇಳಿ ಎರಡು ವರ್ಷವಾಗಿದೆ ಸ್ವಾಮಿ. ಮಾನ್ಯ ಸದಸ್ಯರು ಹೋಗಿ ಅವರನ್ನು ಒಪ್ಪಿಸಿದರೆ ಅನುಕೂಲ.

ಶ್ರೀ ಎರಭದ್ರಪ್ಪ ಈರಪ್ಪ.—ಈಗ ಮಂಗಳೂರು ಮತ್ತು ಕಿನಹಾಳ ಗ್ರಾಮಗಳಲ್ಲಿ ಕೆಲಸವನ್ನು ಮುಂದುವರಿಸಲಾಗಿದೆ ಎಂದು ಹೇಳಿದ್ದಾರೆ. ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಪೋಲ್ಸ್ ಹಾಕಿ ವೈರ್ ಎಳೆಯುವುದು ಅಷ್ಟು ಮಾಡುತ್ತಿದ್ದಾರೆ. ಇನ್ನು ಏನೂ ಇಲ್ಲ. ಈ ಎರಡು ಗ್ರಾಮಗಳಿಗಾಗಿ ಅಂದಾಜಾಗಿರುವ 5,21,400 ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಪೋಲ್ಸ್ ಹಾಕುವುದು ಮತ್ತು ವೈರಿಂಗ್ ಆಗುತ್ತಿದೆ.

ಶ್ರೀ ಟಿ. ಎಚ್. ಮಾದಪ್ಪ ಗೌಡ.—ಶೇಕಡ ಏಳೂವರೆಯಷ್ಟು ಖರ್ಚು ಕೊಟ್ಟರೆ ವಿದ್ಯುಚ್ಛಕ್ತಿ ಒದಗಿಸುವುದನ್ನು ಯೋಚನೆ ಮಾಡುತ್ತೇವೆಂದು ಹೇಳಿದರು. ಪವರ್ ಉಪಯೋಗಿಸಿಕೊಂಡು ಅದರ ಮೇಲೆ ಕೊಡುವ ಛಾರ್ಜ್ ಅಲ್ಲದೆ ಬೇರೆ ಕೊಡಬೇಕೇ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಸಾಧಾರಣವಾಗಿ ಅವರಿಂದ ಬರತಕ್ಕದ್ದು ಶೇಕಡ ಏಳೂವರೆಯಷ್ಟು ಆಗಬೇಕು. ಅಷ್ಟು ಪ್ರತಿಫಲ ಬರುವಂತೆ ಗ್ಯಾರಂಟಿ ಕೊಡಬೇಕು. ಅದರಿಂದ ಲುಕ್ಸಾನಾಗಬಾರದು. ಇದರಲ್ಲಿ ಲಾಭದ ಪ್ರಶ್ನೆ ಇಲ್ಲ. ಲುಕ್ಸಾನಾಗದಂತೆ ನೋಡಿಕೊಳ್ಳಬೇಕು.

———

Supply of Electricity to pumpsets installed in Irrigation wells in the Villages of Yelburga, Kushtagi and Koppal Taluks.

*Q.—375. Sri VEERABHADRAPPA ERAPPA (Yelburga).—

Will the Government be pleased to state :—

(*a*) whether they have received any applications from the ryots of Yelburga, Kustagi and Koppal taluks requesting them to supply electricity to pumpsets installed in Irrigation Wells ;

(*b*) if so, the number of applications received from each village n the above Taluks together with the dates of applications ;

(*c*) the amount deposited with reference to each village ;

(*d*) when they propose to supply Electricity to those villages ?

A.—Sri S. NIJALINGAPPA (Chief Minister).—

(*a*) Yes.

(*b*) Applications for Irrigation Pumpsets received during 1962-63 are :—

(1)	Yelburga ...	8
(2)	Kustagi ...	6
(3)	Koppal ...	120

A statement showing the number of applications and dates of receipt is appended.

(*c*) (1) Yelburga about Rs. 174
(2) Kustagi about Rs. 45
(3) Koppal about Rs. 450

(*d*) Before November 1994.

Statement showing the number of applications received from each village together with the dates of their receipt.

Sl. No.	Name of village	No. of applications received.	Date of receipt
1	2	3	4
	I KOPPAL TALUK		
1	Hiresindhgi ...	26	26th December 1958
2	Chicksindhgi ...	12	26th December 1958
3	Kopal ...	5	7th December 1959
	Do ...	1	5th February 1963
	Do ...	2	11th February 1963
	Do ...	1	20th April 1963
4	Uppinabetegeri ...	15	22nd August 1961
	Do ...	4	4th March 1963
	Do ...	20	6th June 1963
5	Ginigeri ...	2	4th March 1963
	Do ...	6	12th February 1963
	Do ...	3	9th January 1964
6	Kidadahal ...	1	28th January 1963
	Do ...	2	4th February 1963
	Do ..	1	5th February 1963
	Do ...	1	6th June 1963
7	Halawatti ...	1	3rd Oetober 1963
	Do ...	1	2nd November 1963
	Do ...	1	21st November 1963
	Do ...	1	3rd February 1964
8	Mellakeri ...	1	10th July 1963
9	Hati ...	1	10th July 1963
10	Bisevehalli ...	6	8th December 1963
11	Paramallikanahalli ...	3	19th April 1963
12	Belur ...	3	16th July 1963
	II YELBURGA TALUK		
1	Yelburga ...	8	2nd December 1963
	III KUSHTAGI TALUK		
1	Kushtagi ...	1	13th April 1962
	Do ...	1	21st June 1962
	Do ...	1	11th December 1962
	Do ...	1	1st April 1963
	Do ...	1	25th April 1963
	Do ...	1	24th May 1963
		6	

ಶ್ರೀ ವೀರಭದ್ರಪ್ಪ ಈರಪ್ಪ.—ಅಮ್ಮು ಹಿಂದೆಯೇ ಕೊಪ್ಪಲ ತಾಲ್ಲೂಕಿನಿಂದ ಅರ್ಜಿಗಳನ್ನು ಕಳುಹಿಸಿದ್ದರೂ ವಿದ್ಯುಚ್ಛಕ್ತಿಯನ್ನು ಒದಗಿಸದಿರುವುದಕ್ಕೆ ಕಾರಣವೇನು?

†ಶ್ರೀ ಎಸ್. ನಿಜಲಿಂಗಪ್ಪ.—ಮೊದಲು ಅದಕ್ಕೆ ಬೇಕಾದ ನಲಕರಣೆಗಳಿಲ್ಲದಿದ್ದುದರಿಂದ ಹಾಗಾಯಿತು, ಈಗ ಅದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ವೀರಭದ್ರಪ್ಪ ಈರಪ್ಪ.—ಕೊಪ್ಪಲ ತಾಲ್ಲೂಕಿನಲ್ಲೇ ವಿದ್ಯುಚ್ಛಕ್ತಿ ಹುಟ್ಟುತ್ತಿರುವುದು ಗೊತ್ತಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಕೊಪ್ಪಲನಲ್ಲಿ ಉತ್ಪತ್ತಿಯಾಗುವುದು ಗೊತ್ತಿಲ್ಲ.

ಶ್ರೀ ವೀರಭದ್ರಪ್ಪ ಈರಪ್ಪ.—ತುಂಗಭದ್ರ ಕೊಪ್ಪಲ ತಾಲ್ಲೂಕಿನಲ್ಲಿದೆ, ಅಲ್ಲಿ ಉತ್ಪತ್ತಿಯಾಗುತ್ತಿದೆಯಲ್ಲವೆ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು, ಅಲ್ಲಿ ಉತ್ಪತ್ತಿಯಾಗುವುದು ಸರ್ಕಾರಕ್ಕೆ ಗೊತ್ತಿದೆ.

ಶ್ರೀ ಟಿ. ಮಾದಯ್ಯಗೌಡ.—ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೆ ದೇಶದಲ್ಲಿ ಸಾಮಾನು ಸಲಕರಣೆಗಳಿಲ್ಲದೇಯಿರುವ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಮುಂದೇನು ಕಾರ್ಯಕ್ರಮ ತೆಗದುಕೊಳ್ಳುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಕಷ್ಟದ ಕೆಲಸ. ಅದಕ್ಕೆ ಟ್ರಾನ್ಸ್‌ಫಾರ್ಮರುಗಳು ಮತ್ತು ವೈರ್‌ಬೇಕು. ಇವು ನಮ್ಮಲ್ಲಿಲ್ಲ. ಅಲ್ಯುಮೀನಿಯಂ ವೈರ್ ಇಲ್ಲಿ ತಯಾರುಮಾಡುವುದಕ್ಕೆ ಈಗ ತಾನೆ ಪ್ರಯತ್ನ ನಡೆಯುತ್ತಿದೆ. ಟ್ರಾನ್ಸ್‌ಫಾರ್ಮರು ತಯಾರಿಕೆ ಬೆಂಗಳೂರಿನಲ್ಲಿದೆ, ಹೆಚ್ಚು ಉತ್ಪತ್ತಿಯಾದರೆ ಈ ಕಷ್ಟ ಸ್ವಲ್ಪಮಟ್ಟಿಗೆ ಕಡಮೆಯಾಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿಯನ್ನೊದಗಿಸಬೇಕಾದರೆ ಇಷ್ಟುಗ್ಯಾರಂಟಿ ಕೊಡಬೇಕೆಂದು ಕೇಳುತ್ತೀರಿ, ಹೀಗೆಯೇ ನಗರಗಳಲ್ಲಿಯೂ ಕೇಳುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲಿ ಯಾವಾಗಲೂ ಹೆಚ್ಚಾಗಿ ಉತ್ಪತ್ತಿ ಬರುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಶರಾವತಿಯ ವಿದ್ಯುಚ್ಛಕ್ತಿ ಬಂದರೆ ಎಷ್ಟುದಿವಸಗಳಲ್ಲಿ ಹಳ್ಳಿಗಳಿಗೆ ಒದಗಿಸುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಆ ಪ್ರಶ್ನೆಬೇರೆ; ಹಳ್ಳಿಗಳಿಗೊದಗಿಸುವುದಕ್ಕೂ ಪಟ್ಟಣಗಳಿಗೊದಗಿಸುವುದಕ್ಕೂ ವ್ಯತ್ಯಾಸವಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಗ್ರಾಮಾಂತರಗಳ ಜನರು ಬಹಳ ಬಡವರು ಅವರು ಶೇಕಡ ಏಳೂವರೆ ಗ್ಯಾರಂಟಿ ಕೊಡಬೇಕೆಂದರೆ ಹೆಚ್ಚಾಗುತ್ತದೆ, ಮುಲೆನಾಡಿಗಾದರೂ ಶೇಕಡ ಐದರಷ್ಟು ಎಂದು ಮಾಡುತ್ತೀರ?

ಶ್ರೀ ಎಸ್. ನಿಜಲಿಂಗಪ್ಪ.—ಮುಲೆನಾಡಿಗೆ ಈಗಾಗಲೇ ರೀಯಾಯಿತಿ ತೋರಿಸುತ್ತಿದ್ದೇವೆ.

ಶ್ರೀ ಎಚ್. ಆರ್. ಕೇಶವವರ್ಮೂರ್ತಿ.—ಮೈದಾನ ಪ್ರದೇಶಕ್ಕೂ ಹೀಗೆ ಮಾಡಿದರೆ ಅನುಕೂಲವಾಗುತ್ತದಲ್ಲವೆ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ತಕ್ಕಷ್ಟು ಪಂಪುಗಳನ್ನು ಒದಗಿಸಿದರೆ ಅದಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನೊದಗಿಸುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—180 ಟನ್‌ವೈರ್ ಬರುತ್ತಿದೆ, ಬಹುಶ: ಅದು ಇನ್ನು ಎಂಟು ಹತ್ತುದಿವಸಗಳಲ್ಲಿ ಬರಬಹುದು, ಆಮೇಲೆ ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕೆಲವುಕಡೆ ವೈರ್ ಶೇಖರಣೆಯಾಗಿ ಉಪಯೋಗಿಸದೆ ಹಾಗೆಯೇ ನಿಂತಿದೆ ಅದನ್ನು ಬೇರೆಕಡೆ ಕಳುಹಿಸುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಿ ಉಪಯೋಗವಾಗದೆ ಹಾಗೆಯೇ ನಿಂತಿದೆ ಎಂಬುದನ್ನು ನನಗೆ ತಿಳಿಸಿದರೆ, ನೋಡುತ್ತೇನೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಉದಾಹರಣೆಗೆ, ಮಂಗಳೂರು ಪೋರ್ಟಿನ ಹತ್ತಿರ ಇದೆ.

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ.

ಶ್ರೀ ಸಿದ್ಧಯ್ಯ ಕಾಶೀಮಠ.—1958ನೆಯ ಇನಪಿಯಿಲ್ಲ ಡಿಪಾಜಿಟ್‌ಕೊಟ್ಟು ಕೇಳಿರುವವರಿಗೆ ಈಗಲಾದರೂ ಕೊಡುತ್ತೀರ?

ಶ್ರೀ ಎಸ್. ನಿಜಲಿಂಗಪ್ಪ.—ಖಂಡಿತವಾಗಿಯೂ ಕೊಡುವುದಕ್ಕೆ ಪ್ರಯತ್ನ ನಡೆದಿದೆ.

ಶ್ರೀ ಟಿ. ಮಾದಯ್ಯಗೌಡ.—ಆಹಾರವನ್ನು ಹೆಚ್ಚು ಉತ್ಪತ್ತಿಮಾಡಲು ಪ್ರಥಮ ಪ್ರಾಶಸ್ತ್ಯ ಕೊಟ್ಟು ವಿದ್ಯುಚ್ಛಕ್ತಿಯನ್ನೊದಗಿಸುವುದು ಸರಕಾರದ ನೀತಿಯೆ? ಫಲತಾಂಶ ಅಷ್ಟಾಗಿ ಆಗದಿರಲು ಕಾರಣವೇನು?

ಶ್ರೀ ಎಸ್. ನಿಜಲಿಂಗಪ್ಪ.—ನಿರೀಕ್ಷೆಗಿಂತ ಹೆಚ್ಚಿನ ಫಲತಾಂಶವಾಗಿದೆ; ಅದರೂ ಅದಷ್ಟು ಬೇಗ ಪೂರೈಕೆ ಮಾಡಬೇಕೆಂಬುದು ಸರಕಾರದ ಉದ್ದೇಶ.

Foodgrain Production during the Second Plan.

*Q.—400. Sri ANNARAO GANAMUKHI (Afzalpur).—

Will the Government be pleased to state :—

(*a*) the figures of foodgrain production during the Second Plan and the additional production potential crop-rise during the years 1961-62, 1962-63 and the heads under which it is planned;

(*b*) Whether the increase is keeping pace with the schedule ;

(*c*) the estimated requirements of cereals and pulses for the estimated population during the year 1962–63;

(*d*) whether the agricultural production plan is expected to double the annual rate of foodgrain production fixed in the Third Plan in the State?

A.—Sri M. V. KRISHNAPPA (Minister for Revenue).—

(*a*) (i) The year-wise production of foodurains during the Second Plan is as follows:

		tons.
1956—57	...	32,79,000
1957—58	...	37,07,000
1958—59	...	38,16,000
1959—60	...	40,04,000
1960—61	...	35,87,000

(ii) The target of the Third plan of additional foodgrains is 10.02 lakh tons and the break-up *viz.* the heads under which it is planned is as follows:

		(lakh tons)
1. Major and Medium irrigation	...	0.99
2. Minor irrigation programmes	...	0.25
		(lakh tons)
3. Land Development and Soil conservation and dry farming practices	...	0.32
4. Fertilisers and manures	...	5.51
5. Improved seeds	...	0.88
6. Improved Agricultural practices	...	0.85
7. Other measures	...	1.22
Total	...	10·02